ವಿಷಯ:- ರಾಜ್ಯದಲ್ಲಿ ಕಬ್ಬು ಬೆಳೆ ಹಾಳಾಗಿರುವ ಬಗ್ಗೆ.

53(107)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ. ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು);

ಆ. ರಾಜ್ಯದ ರೈತರು ಬೆಳೆಯುತ್ತಿರುವ ಕಬ್ಬಿನ ಪ್ರಮಾಣವೆಷ್ಟು; ಹಾಲಿ ಈಗ ಇರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಬೆಳೆ ಸಾಕಾಗುತ್ತಿದೆಯೇ;

ಇ. ರೈತರು ಬೆಳೆದ ಕಬ್ಬನ್ನು ಕಾರ್ಖಾನೆಯವರು ಪಡೆಯಲು ನಿರಾಕರಿಸಿ ಕಬ್ಬು ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಈ. ಗಡಿ ಜಿಲ್ಲೆಗಳ ರೈತರು ಕಬ್ಬನ್ನು ಹೊರ ರಾಜ್ಯಗಳ ಕಾರ್ಖಾನೆಗಳಿಗೆ ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಉಮೇಶ ವಿ. ಕತ್ತಿ (ಸಕ್ಕರೆ ಸಚಿವರು):-

ಅ. ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿರುತ್ತವೆ. ಜಿಲ್ಲಾವಾರು ವಿವರವನ್ನು ಲಗತ್ತಿಸಿದೆ.

ಆ. ಪ್ರಸಕ್ತ ಸಾಲಿನಲ್ಲಿ 196.00 ಲಕ್ಷ ಟನ್ ಕಬ್ಬಿನ ಉತ್ಪಾದನೆಯನ್ನು ಅಂದಾಜು ಮಾಡಲಾಗಿದೆ. ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆಯಾಗುವ ಕಬ್ಬಿನ ಪ್ರಮಾಣವು ಸಾಮಾನ್ಯವಾಗಿ ಬೆಲ್ಲದ ಬೆಲೆಯನ್ನು ಅವಲಂಬಿಸಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಬೆಲ್ಲಕ್ಕೆ ಒಳ್ಳೆಯ ಬೆಲೆ ಇರುವುದರಿಂದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆಯಾಗುವ ಕಬ್ಬಿನ ಪ್ರಮಾಣ ಕಳೆದ ಸಾಲಿಗಿಂತ ಕಡಿಮೆಯಾಗಿದೆ. ಮೈಸೂರು, ಮಂಡ್ಯ, ಬೆಳಗಾವಿ, ಬಿಜಾಪುರ, ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಬೆಳೆ ಸಾಕಾಗಿದೆ. ಉಳಿದ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಹಂಗಾಮಿನ ಅಂತ್ಯಕ್ಕೆ ಕಬ್ಬಿನ ಕೊರತೆ ಉಂಟಾಗುವ ಸಂಭವ ಇರುತ್ತದೆ.

ಇ. ಪ್ರಸಕ್ತ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಯ ಕಬ್ಬನ್ನು ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ. ಬಂದಿದೆ. ಕೊರತೆ ಇರುವ ಭಾಗಗಳಿಂದ ಸಾಗಾಣಿಕೆ ಆಗುವುದನ್ನು ತಡೆಗಟ್ಟಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಹೆಚ್ಚುವರಿ ಕಬ್ಬಿನ ಸಮಸ್ಯೆಯಿರುವ ಜಿಲ್ಲೆಗಳಿಂದ ಕಬ್ಬನ್ನು ರೈತರ ಹಿತದೃಷ್ಟಿಯಿಂದ ಹೊರ ರಾಜ್ಯಕ್ಕೆ ಸಾಗಿಸಲು ಅನುಮತಿ ನೀಡಿದೆ.

<u>ರಾಜ್ಯದಲ್ಲಿ ಸ್ಥಾಪಿತವಾಗಿರುವ ಸಕ್ಕರೆ ಕಾರ್ಖಾನೆಗಳು</u>

ಕ್ರ. ಸಂ.	ಜಿಲ್ಲೆಯ ಹೆಸರು	ಸಕ್ಕರೆ ಕಾರ್ಖಾನೆಯ ಹೆಸರು	ಒಟ್ಟು ಸ್ಥಾಪಿತವಾಗಿರುವ ಸಕ್ಕರೆ ಕಾರ್ಖಾನೆಗಳು	ಕಾರ್ಖಾನೆ ಸ್ಥಾಪಿತವಾಗಿರುವ ಸ್ಥಳ
1	2	3	4	5
1.	ಬೀದರ್	ಬೀದರ್ ಸ.ಸ.ಕಾ.	1	ಹಳ್ಳಿಖೇಡ್
2.	ಚಿತ್ರದುರ್ಗ	1. ವಾಣಿವಿಲಾಸ ಸ.ಸ.ಕಾ	3	ಹಿರಿಯೂರು
		2. ಭದ್ರಾ ಸ.ಸ.ಕಾ		ದೊಡ್ಡಬಾತಿ
		3. ದಾವಣಗೆರೆ ಶುಗರ್ಸ್		ಕುಕ್ಕವಾಡ
3.	ದಕ್ಷಿಣ ಕನ್ನಡ	ದಕ್ಷಿಣ ಕನ್ನಡ ಸ.ಸ.ಕಾ	1	ಬ್ರಹ್ಮಾವರ
4.	ಹಾಸನ	ಹೇಮಾವತಿ ಸ.ಸ.ಕಾ.	1	ಶ್ರೀನಿವಾಸಪುರ
5.	ಕೋಲಾರ	ಸಿರಗುಪ್ಪ ಶುಗರ್ಸ್	1	ಗೌರಿಬಿದನೂರು
6.	ಧಾರವಾಡ	ಕರ್ನಾಟಕ ಸ.ಸ.ಕಾ.	1	ಹಾವೇರಿ
7.	ಬಳ್ಳಾರಿ	1. ಕಂಪ್ಲಿ ಸ.ಸ.ಕಾ.	3	ಕಂಪ್ಲಿ
		2. ಐ ಎಸ್.ಆರ್		ಹೊಸಪೆಟೆ
		3. ಸಿರಗುಪ್ಪ ಶುಗರ್ಸ್		ದೇಶನೂರು
8.	ಗುಲ್ಬರ್ಗಾ	ಸಹಕಾರಿ ಸಕ್ಕರೆ ಕಾರ್ಖಾನೆ	1	ಭೂಸನೂರು
9.	ಮಂಡ್ಯ	1. ಪಾಂಡವಪುರ ಸ.ಸ.ಕಾ.	3	ಪಾಂಡವಪುರ
		2. ಮೈಸೂರು ಸಕ್ಕರೆ ಕಂಪೆನಿ		ಮಂಡ್ಯ
		3. ಶ್ರೀ ಚಾಮುಂಡೇಶ್ವರಿ ಶುಗರ್ಸ್		ಕೆ.ಎಂ. ದೊಡ್ಡಿ
10.	ಬಿಜಾಪುರ	1. ನಂದಿ ಸ.ಸ.ಕಾ	2	ಕೃಷ್ಣಾನಗರ
		2. ಗೋದಾವರಿ ಶುಗರ್ಸ್		ಸಮೀರವಾಡಿ
11.	ರಾಯಚೂರು	ಗಂಗಾವತಿ ಶುಗರ್ಸ್	1	ಪ್ರಗತಿನಗರ
12.	ಮೈಸೂರು	1. ಶ್ರೀ ಶ್ರೀರಾಮ ಸ.ಸ.ಕಾ	3	ಚುಂಚನಕಟ್ಟೆ
		2. ಬನ್ನಾರಿ ಅಮ್ಮನ್ ಶುಗರ್ಸ್		ಅಲಗಂಚಿ
		3. ಮಹದೇಶ್ವರ ಶುಗರ್ಸ್		ಕುಂತೂರು

1	2	3	4	5
13.	ಶಿವಮೊಗ್ಗ	1. ಎಂ.ಪಿ.ಎಂ. ಶುಗರ್ಸ್	2	ಭದ್ರಾವತಿ
		2. ತುಂಗಭದ್ರಾ ಶುಗರ್ಸ್		ಶಿವಮೊಗ್ಗ
14.	ಬೆಳಗಾಂ	1. ದೂಧಗಂಗಾ ಕೃಷ್ಣಾ ಸ.ಸ.ಕಾ		ಚಿಕ್ಕೋಡಿ
		2. ಘಟಪ್ರಭಾ ಸ.ಸ.ಕಾ.		ಗೋಕಾಕ
		3. ಹಾಲಸಿದ್ಧನಾಥ ಸ.ಸ.ಕಾ.		ನಿಪ್ಪಾಣಿ
		4. ಹಿರಣ್ಯಕೇಶಿ ಸ.ಸ.ಕಾ.	7	ಸಂಕೇಶ್ವರ
		5. ಮಲಪ್ರಭಾ ಸ.ಸ.ಕಾ.		ಎಂ.ಕೆ. ಹುಬ್ಬಳ್ಳಿ
		6. ರಾಯಬಾಗ್ ಸ.ಸ.ಕಾ.		ರಾಯಬಾಗ್
		7. ಉಗಾರ ಶುಗರ್ ವರ್ಕ್ಸ್		ಉಗಾರ್-ಖುರ್ದ್
		ಒಟ್ಟು	30	

ವಿಷಯ:- ಬಿಜಾಪುರದಲ್ಲಿ ನೀರು ಪೂರೈಕೆ.

55(102)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಿಜಾಪುರ ನಗರದಲ್ಲಿ 7 ದಿನಕ್ಕೊಮ್ಮೆ ಒಂದೂವರೆ ಗಂಟೆ ಮಾತ್ರ ಕುಡಿಯುವ ನೀರು ಬಿಡುತ್ತಿರುವುದು ನಿಜವೇ;

ಆ) ಇದಕ್ಕೆ ವಿದ್ಯುತ್ ಅಭಾವ ಕಾರಣವೇ? ಅಥವಾ ಬೇರೆ ಕಾರಣಗಳೇನು;

ಇ) ನೀರು ಪೂರೈಕೆಗಾಗಿ ಪ್ರತ್ಯೇಕ ವಿದ್ಯುತ್ ಲೈನ್ ಹಾಕಲು ಬಿಜಾಪುರ ನಗರ ಸಭೆ ರೂ. 17 ಲಕ್ಷ ನೀಡಲಾಗಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ನಿಜವಲ್ಲ. ಬಿಜಾಪುರ ನಗರದಲ್ಲಿ ನಾಲ್ಕು ದಿನಕ್ಕೊಮ್ಮೆ ಎರಡರಿಂದ ಎರಡೂವರೆ ಗಂಟೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಆ) ಇದಕ್ಕೆ ವಿದ್ಯುತ್ ಅಭಾವವೂ ಒಂದು ಕಾರಣ. ಬಿಜಾಪುರ ನಗರ ನೀರು ಸರಬರಾಜು ಸ್ಥಾವರಗಳಿಗೆ ದಿನಂಪ್ರತಿ ಸರಾಸರಿ 16 ರಿಂದ 18 ಗಂಟೆ ಮಾತ್ರ ವಿದ್ಯುತ್ ಸರಬರಾಜು ಲಭ್ಯವಾಗುತ್ತಿದೆ. ಬಿಜಾಪುರ ನಗರದ ನೀರು ಸರಬರಾಜು ವಿತರಣಾ ವ್ಯವಸ್ಥೆ ಬಹಳ